IJFANS INTERNATIONAL JURNAL OF FOOD AND NUTRITIONAL SCIENCES

ISSN PRINT 2319 1775 Online 2320 7876

*Research Paper* @ 2012 IJFANS. All Rights Reserved UGCC ARE Listed (Group–I) Journal Volume 8, iss 4, Aug-2019

# ಪಂಚಾಚಾರಗಳು

**ಡಾ:ಕಾಳಿಂಗ ಡಿ ಗೊಳಸಂಗಿ**

ಮುಖ್ಯಸ್ಥರು, ಕನ್ನಡ ವಿಭಾಗ

ಶ್ರೀ ಚ.ಚ. ಹೆಬ್ಬಾಳ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೊಳಸಂಗಿ. ಕರ್ನಾಟಕ

ಪೃಥ್ವಿಯ ಮೇಲಿರುವ ಕೋಟ್ಯಾನು ಕೋಟಿ ಜೀವ ರಾಶಿಗಳ ಮೇಲೆ ಪ್ರಭುತ್ವ ಪಡೆದ ಮಾನವ ತನ್ನ ಮನಸ್ಸು, ಬುದ್ಧಿ ಭಾವಗಳಿಗೆ ನೀಡಿದ ನಿರಂತರ ಒತ್ತಡದ ಕಾರಣಗಳಿಂದಾಗಿ ಉಳಿದ ಜೀವಿಗಳಿಗಿಂತ ವಿಭಿನ್ನ ಸ್ತರದಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಲು ಸಾಧ್ಯವಾಗಿದೆ ತನ್ನ ಪ್ರಕೃತಿದತ್ತ ದೈಹಿಕ ಮತ್ತು ಮಾನಸಿಕ ಶಕ್ತಿಯ ಸದುಪಯೋಗಕ್ಕಾಗಿ, ವ್ಯವಸ್ಥೆಯ ಬದುಕಿಕಾಗಿ ಕೆಲವು ಶಾಶ್ವತವಾದ ಮೌಲ್ಯಗಳನ್ನು ಅವಲಂಭಿಸಿ ಜೀವನದ ಅಚಲವಾದ ಗುರಿಯನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಿದ ಮತ್ತು ಮಾಡುತ್ತಿದ್ದಾನೆ ಇದುವೇ ಧರ್ಮದ ಉಗಮಕ್ಕೆ ಕಾರಣವಾಯಿತು.

ಮನುಷ್ಯನ ಮೂಲಭೂತ ಪ್ರವೃತಿಗಳಾದ ಆನಂದದ ಅನ್ವೇಷಣೆ, ಬಿಡುಗಡೆಯ ಬಯಕೆ ಹಾಗೂ ಪೂರ್ಣತ್ವದ ಅಭಿಪ್ಸೆಯಿಂದಾಗಿ ಧರ್ಮ ಪರಿಕಲ್ಪನೆ ಬೆಳೆದು ಬಂದಿದತು. ಮ್ಯಾಕ್ಸ್ ಮಿಲ್ಲರ್ ಹೇಳುವಂತೆ "ತನಗಿಂತ ಬೇರೆಯಾದ ಒಂದು ಅಲೌಕಿಕ ಶಕ್ತಿಯ ಅಸ್ತಿತ್ವದಲ್ಲಿ ನಂಬಿಕೆ ನೀಡುವುದೇ ಧರ್ಮ" ಎಂಬುದು ಸಹಜವೆನಿಸುತ್ತದೆ. ಆದ್ದರಿಂದ ಧರ್ಮವು ಮಾನವ ಜೀವನದ ನಿಯಮ, ನಿಷ್ಠೆಗಳು, ವಿಧಿನಿಷೇಧಗಳು ಹಾಗೂ ಆಚಾರ ವ್ಯವಹಾರಗಳಿಗೆ ಸಹಜವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು ಈ ಹಿನ್ನಲೆಯಲ್ಲಿ ವ್ಯಕ್ತಿ, ಕಾಲ ಪ್ರದೇಶಾತೀತ ನೆಲೆಯಲ್ಲಿ ಅನೇಕ ಧರ್ಮಗಳು ಜನ್ಮತೆಳೆದದ್ದುಂಟು ಆ ಹಿನ್ನಲೆಯಲ್ಲಿ ವೀರಶೈವ ಧರ್ಮವು ಕೂಡಾ ಕಾಲದಿಂದ ಕಾಲಕ್ಕೆ ತನ್ನ ಮುಕ್ತತೆ ಅಧ್ಯಯನಾಸಕ್ತಿ ಕೆರಳಿಸಿರುವುದುಂಟು. ಆ ನಿಟ್ಟಿನಲ್ಲಿ ಪಂಚಾರಾರಗಳನ್ನು ಕುರಿತು ಇಲ್ಲಿ ಅವಲೋಕಿಸಲಾಗಿದೆ.

ವೀರ ಶೈವರಲ್ಲಿ ಗ್ರಹಸ್ಥನಾಗಿದ್ದುಕೊಂಡೇ ವಿರಕ್ತರು ತಲುಪಬಹುದಾದ ಚರಮ ಗುರಿಯನ್ನು ಹೊಂದಬಹುದು. ಐದು ಬಗೆಯ ಆಚಾರಗಳು ವೀರಶೈವರಲ್ಲಿ ಇವೆ. ಲಿಂಗಕ್ಕೆ ಸಂಬಂಧಿಸಿದಂತೆ ವೀರಶೈವನಾದವನ ನಡತೆ ವರ್ತನೆ ಮತ್ತು ಜಾಗರೂಕತೆಗಳ ಕುರಿತು ವಿವರಿಸುವುದು ಲಿಂಗಾಚಾರ.

ಲಿಂಗವಂತನಾದವನು ನೀತಿವಂತನಾಗಿ ಸಮಾಜದಲ್ಲಿ ಒಳ್ಳೆಯತನದಿಂದ, ಪ್ರಕೃತಿದತ್ತ ಪ್ರೀತಿ, ಕರುಣೆ, ವಿಶ್ವಾಸದಿಂದ ನಡೆದುಕೊಳ್ಳಬೇಕೆಂದು ವಿವರಿಸುವುದು ಸದಾಚಾರ.

ಶಿವಭಕ್ತನ ಬಗ್ಗೆ ಮತ್ತು ಇತರರ ಬಗೆಗೆ ಭಕ್ತನಾದವನಲ್ಲಿ ಇರಬೇಕಾದ ಭಾವನೆಗಳು ಅವರೆಲ್ಲರೊಡನೆ ಅವನು ನಡೆದುಕೊಳ್ಳಬೇಕಾದ ರೀತಿಯನ್ನು ಕುರಿತು ವಿವರಿಸುವುದು ಭಕ್ತಾಚಾರ.

ಶಿವನ ಬಗೆಗೆ ವೀರಶೈವನು ಇರಿಸಿಕೊಳ್ಳಬೇಕಾದ ಗೌರವ ಆದರಗಳು ಕುರಿತು ವಿವರಿಸುವುದು ಶಿವಾಚಾರ.

ಶಿವನ ಗುಣಗಳ ಬಗೆಗೆ ವೀರಶೈವನು ಅಭಿಮಾನ, ದೃಡನಿಷ್ಠೆಯುಳ್ಳವನಾಗಿರಬೇಕೆಂದು ಹೇಳುವುದು ಗಣಾಚಾರ.

ಹನ್ನೆರಡನೇ ಶತಮಾನದ ಶರಣರ ಈ ಪಂಚಾಚಾರಗಳನ್ನು ನಂಬಿ ಆಚರಿಸಿತ್ತಿದ್ದರು. ಜನ ಸಾಮಾನ್ಯರಲ್ಲಿ ಕೂಡ ಪ್ರಭಾವಬೀರಿದ್ದರು.

**ಷಟಸ್ಥಲ ಸಿದ್ಧಾಂತ:**

ಅನುಭಾವಸೂತ್ರವು 'ಸ್ಥಲ'ದ ಅರ್ಥ ವಿವರಿಸಿರುವದು. "ಯಾವುದರಿಂದ ಸಮಸ್ತ ಚರಾಚರ ವಸ್ತುಗಳನ್ನೊಳಗೊಂಡ ವಿಶ್ವವು ಹೊರಹೊಮ್ಮಿದೆಯೋ, ಯಾವುದರ ಆಸರೆಯನ್ನು ವಿಶ್ವವು ಹೊಂದಿದೆಯೋ ಮತ್ತು ಯಾವುದರಲ್ಲಿ ಇಡೀ ವಿಶ್ವ ವಿಲೀನವಾಗುತ್ತದೆಯೋ ಅದೇ ಸ್ಥಲ"ಜಗತ್ತಿನ ಉಗಮ ಮತ್ತು ಲಯಗಳಿಗೆ ಕಾರಣವಾದ ವಿಶ್ವತತ್ವವೇ ಸ್ಥಲ, ಏಕೆಂದರೆ ವೀರಶೈವದ ಪ್ರಕಾರ ವಿಶ್ವದ ಕಾರಣವಾದ ಪಂಚಮಹಾಭೂತಗಳು ಹುಟ್ಟುವದು ಬಯಲು ಅಥವಾ ಶೂನ್ಯದಿಂದ ಹೊರಹೊಮ್ಮುವ ಸದಾಶಿವ ಮೂರ್ತಿಯಿಂದ.

ಜೀವಾತ್ಮನ ಆಧ್ಯಾತ್ಮಿಕ ಪಯಣ ಅಥವಾ ಪ್ರಗತಿಯಲ್ಲಿಯ ಒಂದು ಹಂತ ಎಂದರ್ಥದಲ್ಲಿ ಸ್ಥಲವನ್ನು ಬಳಸಲಾಗಿದೆ. ವೀರಶೈವವು ಅಂತಹ ಆರು ಸ್ಥಲಗಳನ್ನು ಯೋಜಿಸಿದೆ.

**ಭಕ್ತ ಸ್ಥಲ:**

ಇದರಲ್ಲಿ ಒಬ್ಬನೇ ಒಬ್ಬನಾದ ಪರಶಿವನಲ್ಲಿ ಗಟ್ಟಿ ನಂಬಿಕೆ ಮತ್ತು ಶಿವನನ್ನು ಬಿಟ್ಟು ಬೇರಾವ ದೇವರನ್ನೂ ಪೂಜಿಸದ ಛಲ. ಶ್ರೀಗುರುವಿತ್ತ ಇಷ್ಟಲಿಂಗವನ್ನೇ ಪರಶಿವನ ಕುರುಹೆಂದು ಭಾವಿಸಿ, ಅದಕ್ಕೇ ನಿಷ್ಠೆಯನ್ನು ಸಲ್ಲಿಸುವುದು. ವೀರಶೈವ ಮತತತ್ವಗಳನ್ನು ಮತ್ತು ನೀತಿ ನಿಯಮಗಳನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸುವುದು. ಜೀವನಿಂದ ಶಿವನು ಬೇರೆಯಾಗಿದಾನೆಂಬುದರಲ್ಲಿ ನಂಬಿಕೆಯಿಡುವುದು.

**ಮಹೇಶ್ವರ ಸ್ಥಲ:**

ಶಿವನ ಮೇಲಿನ ಭಕ್ತಿಯಿಂದ ಆತ್ಮವು ಪರಿಶುದ್ಧವಾದ ಬಳಿಕ ಅಲ್ಲಿ ಜೀವಾತ್ಮನು ತನ್ನ ಅಹಂಭಾವ ಪಂಚಕ್ಲೇಷ ಮನೋವಿಕಾರ, ಹಾಗೂ ಆವೇಗಗಳ ಮೇಲೆ ವಿಜಯ ಸಂಪಾದಿಸುತ್ತದೆ. ಆಗ ಅದು ಆನಂದಮಯ ಸ್ಥಿತಿಯಲ್ಲಿದ್ದು ಎಲ್ಲರಿಗೂ ಒಳ್ಳೆಯದನ್ನೇ ಮಾಡುವ ಬಯಕೆಯನ್ನು ಹೊಂದಿರುತ್ತದೆ. ಜೀವಾತ್ಮನ ಈ ಹಂತವನ್ನು ಮಹೇಶ್ವರ ಸ್ಥಲ ಎನ್ನುತ್ತಾರೆ.

**ಪ್ರಾಣಲಿಂಗಿ ಸ್ಥಲ:**

ಪ್ರಾಣವೇ ಲಿಂಗವೆಂಬ ಭಾವನೆ. ಇಲ್ಲಿ ಪ್ರಾಣವೆಂದರೆಪ್ರಾಣವಾಯುವಲ್ಲ. ಅದು ಸಾಕ್ಷಾತ್ ಆತ್ಮ. ಜೀವಾತ್ಮನಿಗೆ ಈ ಹಂತದಲ್ಲಿ ಉಂಟಾಗುವುದರಿಂದ ಅವನನ್ನು ಪ್ರಾಣಲಿಂಗಿ ಎಂದು ಮತ್ತು ಆ ಹಂತವನ್ನು ಪ್ರಾಣಲಿಂಗಿ ಸ್ಥಲವೆಂದು ಕರೆಯಲಾಗುತ್ತದೆ.

**ಶರಣ ಸ್ಥಲ:**

ಜೀವನು ಶಿವನಿಗೆ ಸಂಪೂರ್ಣ ಶರಣಾಗತನಾಗುವುದು, ಇಲ್ಲಿ ಭಕ್ತಿಯು 'ಆತ್ಮರ್ಪಣ' ಹೆಸರಿನ ಅತ್ಯುನ್ನತವಾದ ಇನ್ನೊಂದು ರೂಪವನ್ನು ಪಡೆಯುತ್ತದೆ. ಇಲ್ಲಿ ಆತ್ಮ ಮತ್ತು ದೇವನ ಮಧ್ಯ ಅನ್ಯೋನ್ಯತೆಯೇರ್ಪಟ್ಟಿರುತ್ತದೆ.

**ಐಕ್ಯ ಸ್ಥಲ:**

ಇದರಲ್ಲಿ ಆತ್ಮವು ದೇವನಲ್ಲಿ ಸಂಪೂರ್ಣ ಒಂದಾಗುವದೆಂಬ ಅಂಶ ನಮಗೆ ಮನದಟ್ಟಾಗುತ್ತದೆ. ಆತ್ಮನಿಗೆ ಉಂಟಾಗುವ ಈ ಐಕ್ಯಸ್ಥಿತಿ ಶೂನ್ಯ ಸ್ಥಿತಿಯಲ್ಲದೇ ಬೇರೆನೂ ಅಲ್ಲ. ಇದು ವೀರಶೈವದ ಒಂದು ವಿಶಿಷ್ಟ ಅಂಶ.

**ಅನುಭವಮಂಟಪದ ಪ್ರೇರಣೆ:**

ಅನುಭವಕ್ಕೆ ಪ್ರಾಮುಖ್ಯತೆ ಕೊಟ್ಟು ವ್ಯಕ್ತಿಯ ಮನೋಧರ್ಮಕ್ಕನುಸಾರವಾಗಿ ಹೊರಹೊಮ್ಮುವ ಜ್ಞಾನ ಭಕ್ತಿ ಕ್ರಿಯೆಗಳನ್ನು ಪರಿಶೀಲಿಸಿ ತಾವು ಅನುಭವಿಸಿದಂತೆಯೇ ಇತರೆ ಜನರಿಗೂ ಸಹ ಅದರ ಅನುಭವ ಕೊಡುವದೇ ಶರಣರ ಧ್ಯೇಯವಾಗಿತ್ತು. ಆತ್ಮ ಕಲ್ಯಾಣದ ಜೊತೆಗೆ ಮಾನವ ಕಲ್ಯಾಣವೂ ಆಗಬೇಕಿತ್ತು. ಈ ಹಿನ್ನೆಲೆಯಲ್ಲಿ ಅವರು ತಿಳಿಯಹೇಳದ ವಾಕ್ಯಗಳೇ ವಚನಗಳು. ಅವರು ಈ ರೀತಿಯಾಗಿ ಸಂಗ್ರಹಿಸಿದ ಸಂಪಾದನೆಯೇ ಶಿವಾನುಭವವಾಯಿತು. ಪ್ರತಿಯೊಬ್ಬರಿಗೂ ಪರಿಶುದ್ಧವಾದ ಅವರವರ ಹೃದಯವೇ ಆಧಾರವಾಗಿದ್ದವು. ಅನಭವದಿಂದ ಸಂಬಂಧಿಸಿದ ಪ್ರಗತಿಯೆ ಪುರೋಭಿವೃದ್ಧಿಯ ಕುರುಹಾಯಿತು. ಆಚರಣೆಗಳ ಪರಿಷ್ಕರಣವಾಯಿತು. ತತ್ಪರಿಣಾಮವಾಗಿ ಅಂದಿನ ಸಮಾಜದಲ್ಲಿ ಹೊಸ ಬಗೆಯ ಚಲನಶೀಲ ವಾತಾವರಣವುಂಟಾಯಿತು. ಅನುಭವಮಂಟಪದ ಮಥನದಿಂದ ವೀರಶೈವಧರ್ಮದ ತಾತ್ವಿಕ ವಿವೇಚನೆ ಆಳವಾಗಿ ಬೇರುಬಿಟ್ಟಿತು.

**ಸಮಾಜದಲ್ಲಿ ಸ್ತ್ರೀ ಸ್ಥಾನಮಾನ:**

ಸ್ತ್ರೀಯರಿಗೆ ಸಮಾಜದಲ್ಲಿ ಸಮಾನ ಪ್ರತಿನಿಧಿತ್ವ ನಿಡುವಂತಾಯಿತು. ಲಿಂಗಭೇದವನ್ನು ಕಡೆಗಣಿಸಿ ಹೆಣ್ಣು 'ಮಾಯೆ'ಯೆಂಬ ಅಂಕಿತವನ್ನು ತೀವ್ರವಾಗಿ ವಿರೋಧಿಸಿದರು. ಆಧುನಿಕ ಮಹಿಳಾ ಸಂವೇದನೆಗಳ ಚಿಂತನೆ ಪ್ರಾಯಶಃ ಹೆಣ್ಣು ಮಕ್ಕಳಲ್ಲಿಯೇ ಹೆಚ್ಚು ಪ್ರಮಾಣದಲ್ಲಿದ್ದರೆ. ಅಂದಿನ ದಿನಗಳಲ್ಲಿ ಅನೇಕ ವಚನಗಳಲ್ಲಿ ವಚನಕಾರರು ಆ ಕುರಿತು ತಮ್ಮ ಸ್ಪಷ್ಟ ಉಕ್ತಿಗಳನ್ನು ಹೇಳಿರುವರು.

"ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು,
ಒಳಗೆ ಸುಳಿವಾತ್ಮಾ ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ"
"ಹೆಣ್ಣು ಮಾಯೆಯೆನ್ನುವರು
ಹೊನ್ನು ಮಾಯೆಯೆನ್ನುವರು
ಹೆಣ್ಣು ಮಾಯೆಯಲ್ಲ ಹೊನ್ನು ಮಾಯೆಯಲ್ಲ
ಮಣ್ಣು ಮಾಯೆಯಲ್ಲಾ

ಮನದ ಮುಂದಣ ಆಶೆಯೇ ಮಾಯೆಕಾಣಾ ರಾಮನಾಥ" ಎಂದು ಜೇಡರ ದಾಸಿಮಯ್ಯ ವಾಸ್ತವತೆಯನ್ನು ಎತ್ತಿ ಹೇಳಿದ್ದಾರೆ. " ಹೆಣ್ಣು ಕಪಿಲಸಿದ್ದ ಮಲ್ಲಿಕಾರ್ಜುನ" ಎಂದು ಸಿದ್ದರಾಮ ಹೇಳಿದರೆ, ಬಸವಣ್ಣ "ಪರವಧುವನ್ನು ಮಹಾದೇವಿಯೆಂಬೆ" ಎಂದಿರುವನು. ವೀರಶೈವ ಧರ್ಮದಲ್ಲಿ ಸ್ತ್ರೀಯರಿಗೆ ಸರಿಸಮಾನವಾದ ಸ್ಥಾನಮಾನಗಳಿವೆ. ವೈದಿಕ ಧರ್ಮದಂತೆ ವಿಧಿ ನಿಷೇಧಗಳಿಲ್ಲ.

**ಬಸವೋತ್ತರಯುಗಧರ್ಮ :**

ಕಲ್ಯಾಣ ಕ್ರಾಂತಿಯ ನಂತರವೂ ಕೂಡ ವೀರಶೈವ ಧರ್ಮ ತನ್ನ ಸಮಚಿತ್ತವನ್ನು ಕಾಯ್ದುಕೊಳ್ಳುವಲ್ಲಿ ಪ್ರಯತ್ನಿಸಿತು. ಅಂದರೆ ಈ ಕ್ರಾಂತಿಯಿಂದಾಗಿ ವೀರಶೈವವೆಂಬ ತುಂಬಿದ ಕೆರೆ ಒಡೆದು ನೀರು ಎಲ್ಲೆಡೆ ಹರಡಿದರೂ ಕೂಡ ಈ ಬಲವು ಹತ್ತು ದಿಕ್ಕಿಗೆ ಪ್ರವಹಿಸುವ ಮೂಲಕ ವೀರಶೈವಕ್ಕೆ ವಿಶಾಲವಾದ ವ್ಯಾಪ್ತಿಯನ್ನು ಒದಗಿಸಿತು. ಶೈವ–ವೀರಶೈವಗಳು ವಿಲೀನಗೊಳ್ಳುವುದರ ಮೂಲಕ ಒಂದಾದವು. ಕಾಳಾಮುಖ ಪಾಶುಪಥರೂ ವೀರಶೈವರೆಂಬ ಪರಿಭಾವನೆ ನಂತರದ ವೀರಶೈವ ಕವಿಗಳಾದ ಲಕ್ಕಣ್ಣ ದಂಡೆಶನ ಶಿವ ತತ್ವ ಚಿಂತಾಮಣಿ, ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣಗಳಲ್ಲಿ ವ್ಯಕ್ತವಾಗಿದೆ. ಇದೇ

ಸಮಯದಲ್ಲಿ ಬಂದ ಅನೇಕ ಪಾಳೆಗಾರರು ಸಂಸ್ಥಾನಿಕರು ವೀರಶೈವರಾಗಿದ್ದರು. ಬೂದಿಹಾಳದ ಸಿರುಮನ ಮನೆತನ, ಕಿತ್ತೂರು, ಕಾಗತಿ, ಸಿರಸಂಗಿ, ತಲ್ಲೂರು, ಚಚಡಿ, ರುದ್ರಾಪೂರ, ದೇಶಗತಿಗಳು ಈ ಧರ್ಮವನ್ನು ಪಾಲಿಸುತ್ತಿದ್ದವು.

ಇಂದಿನ ವೀರಶೈವವೂ ಜಂಗಮದಿಂದ ಮತ್ತೇ ಸ್ಥವರದೆಡೆಗೆ ಹೆಜ್ಜೆಯಿಟ್ಟಿದೆ. ಇಷ್ಟಲಿಂಗದ ಪರಿಕಲ್ಪನೆಯ ಜೊತೆಗೆ ಇಂದು ಹಲವಾರು ವೈದಿಕ ಆಚರಣೆಗಳಿಗೆ ವೀರಶೈವರು ವಾಲಿತ್ತಿದ್ದಾರೆ. ವೈದಿಕ ಧರ್ಮದ ಎಲ್ಲ ದೇವತೆಗಳ ಆರಾಧನೆ ಅಂದರೆ ಲಿಂಗದ ಜೊತೆಗೆ ಹೋಮ, ಹವನ, ಆಚರಣೆಗಳು ಕಂಡುಬರುತ್ತಿವೆ. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಶಬರಿಮಲೈ, ಮಂತ್ರಾಲಯಗಳಿಗೆ ವೀರಶೈವರು ಹೋಗುತ್ತಿದ್ದಾರೆ. ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಈಶ್ವರ ಕಲ್ಪನೆ ಜನತೆಯನ್ನು ಆಕರ್ಷಿಸುತ್ತದೆ.

**ವೀರಶೈವ – ಲಿಂಗಾಯತ :**

ಈ ವಿಷಯದಲ್ಲಿ ಭಿನ್ನಾಭಿಪ್ರಯಗಳು ಸಹ ಕಂಡುಬರುತ್ತಿವೆ. ಶರಣರು ಪ್ರತಿಪಾದಿಸಿದ್ದು ಲಿಂಗಾಯತ ಧರ್ಮವನ್ನು, ವೀರಶೈವಧರ್ಮವನಲ್ಲ ಎಂಬುದು ವಾದಕ್ಕೆ ಕಾರಣವಾದ ಅಂಶವಾಗಿದೆ. ದೇಹಕ್ಕೆ ಇಷ್ಟಲಿಂಗ ದಿಕ್ಷೆಯನ್ನು ಆಯತಮಾಡಿಕೊಂಡವನೆ ಲಿಂಗಾಯತ. ಅವೆರೆಡು ಪರ್ಯಾಯ ಪದಗಳು. ವೀರಶೈವ ಪದವು ಧರ್ಮ ಮತ್ತು ಜನಾಂಗದ ಹೆಸರಾಗಿ ಬಂದರೆ ಲಿಂಗಾಯತವು ಬಸವನಿಗಿಂತ ಹಿಂದೆ ಆರವತ್ತನಾಲ್ಕು ಶೀಲಗಳಲ್ಲಿ ಒಂದು ಎಂದು ಕೊಂಡಗುಳಿ ಕೇಶಿರಾಜನ ಕೃತಿಗಳಲ್ಲಿ ಉಲ್ಲೇಖವಿದೆ. ಆದರೆ ಲಿಂಗಧಾರಣೆಯೆ ಇಲ್ಲಿ ಪ್ರಮುಖ ಅಂಶ. ವಾದಕ್ಕೆ ಹುರುಳಿಲ್ಲ.

**ಹಿಂದೂ – ವೀರಶೈವ:**

ವಿಷಯದಲ್ಲಿ ಕೂಡ ವಾದವಿದೆ. ಹಿಂದೂ ಪದವು ಒಂದು ಧರ್ಮದ ಹೆಸರಲ್ಲ ಅದು ಅನೇಕ ಧರ್ಮಗಳಿಂದ ಕೂಡಿದ ಸಂಸ್ಥೆಯಾಗಿದೆ. ಅದು ಅನೇಕ ಸ್ವತಂತ್ರ ಧರ್ಮಗಳ ಒಕ್ಕೂಟವಾಗಿದೆ. ಜೈನ, ಬೌದ್ಧ, ಸಿಕ್ ಧರ್ಮಗಳಂತೆ ಪ್ರತ್ಯೇಕ ಅಸ್ಥಿತ್ವಪಡೆದಂತೆ ಧಾರ್ಮಿಕವಾಗಿ ಸ್ವತಂತ್ರ ಅನುಯಾಯಿಗಳನ್ನು ಹೊಂದಿರುವುದರಿಂದ ಅಖಿಲ ಭಾರತ ವೀರಶೈವ ಮಹಾಸಭೆಯು ಜನಗಣತಿಯ ಸಂದರ್ಭದಲ್ಲಿ ಧರ್ಮ ವಿಭಾಗದಲ್ಲಿ ಹಿಂದೂ / ಲಿಂಗಾಯತ ಎಂದಿರುವುದನ್ನು ಗಮನಿಸಬಹುದು. ಅಖಿಲ್ ಭಾರತಿಯ ಬುಡಜಂಗಮ, ಬೇಡಜಂಗಮ ಮಾಲಾಜಂಗಮರ ಮಹಾ ಸಮ್ಮೇಳನದಲ್ಲಿ ಜಂಗಮರು ಬೇಡುವವರು ಆಗಿರುವುದರಿಂದ ಬೇಡಜಂಗಮ ಎಂದು ಮೀಸಲಾತಿಯನ್ನು ಬಯಸುತ್ತಿದ್ದು, ಅವರು ತಮ್ಮ ಧರ್ಮವನ್ನು 'ಹಿಂದೂ/ವೀರಶೈವ–ಜಂಗಮ' ಎಂದು ಉಲ್ಲೇಖಿಸುವ ಕುರಿತು ವಾದವಿದೆ. ಆದರೆ ನಿಜವಾದ ವೀರಶೈವ ಧರ್ಮದ ಮೌಲ್ಯಗಳು, ಆಚರಣೆಗಳು, ಲೌಕಿಕ ಮತ್ತು ಆಧ್ಯಾತ್ಮಿಕ ನಿರ್ದೇಶನಗಳನ್ನು ಗೌಣವಾಗಿಸುತ್ತಿರುವುಯದು ವಿಷಾದನೀಯ.

**ವೀರಕ್ತ – ಜಂಗಮ:**

ಹುಟ್ಟಿನಿಂದ ಜಂಗಮನಾದವನು ಗುರುಪೀಠಕ್ಕೆ ಬರಲು ಅರ್ಹನು ಆಧ್ಯಾತ್ಮಿಕ ಸ್ಥರದಲ್ಲಿ ವೀರಶೈವರನ್ನು ತರಬೇತುಗೊಳಿಸುವುದು, ಉಪದೇಶಿಸುವುದು ಈತನ ಮುಖ್ಯ ಕೆಲಸ ಆದರೆ ವಿರಕ್ತ ಪೀಠಕ್ಕೆ ಬರಲು ಜಂಗಮ ಅಥವಾ ವೀರಶೈವ ಇನ್ನಿತರೆ ಯಾವುದೇ ವರ್ಗದ ವ್ಯಕ್ತಿ ಅರ್ಹನು. ಈತ ಜನಗಳ ಮಧ್ಯದಲ್ಲಿಯೇ ಇದ್ದುಕೊಂಡು ಜನತೆಗೆ ಶಿಸ್ತಿನ ಜೀವನ ಅಂದರೆ ಪೂಜೆ, ಆಚರಣೆ, ನಂಬಿಕೆಗಳ ಬಗೆಗೆ ತಿಳಿಸುತ್ತ, ವೀರಶೈವ ಸಂಸ್ಕಾರಗಳಲ್ಲಿ ನೇರವಾಗಿ ಭಾಗವಹಿಸಿ ಪುರೋಹಿತರಂತೆ ಕಾರ್ಯನಿರ್ವಹಿಸುವರು.

ಸದಾಶಿವ ಮೂರ್ತಿಯಿಂದ ಉದ್ಭವಿಸಿದ ಪಂಚಾಚಾರ್ಯರನ್ನು ಗುರುಪೀಠದ ಜಂಗಮರು ಗೌರವಿಸಿದರೆ, ವಿರಕ್ತಪೀಠದ ಜಂಗಮರು ಬಸವಣ್ಣನ ಅನುಯಾಯಿಗಳು ಎಂದು ನಂಬಿಕೆಯಿದೆ. ಆದರೆ ಇವರೀರ್ವರು ವೀರಶೈವರಿಗೆ ಮಾರ್ಗದರ್ಶಕರಾಗಿರಬೇಕಾದುದಂತು ಸತ್ಯ.

ವೀರಶೈವ ಧರ್ಮ ಇಂದು ಮೂಲ ಧರ್ಮ ತತ್ವಗಳಿಂದ ಅಂತರ ಕಲ್ಪಿಸಿಕೊಳ್ಳುತ್ತಿದೆ. ಆದ್ದರಿಂದ ವೀರಶೈವರು ಮತ್ತು ಅನ್ಯಧರ್ಮಿಯರು ಈ ಧರ್ಮದಲ್ಲಿಯ ಸರಳತೆಯನ್ನು, ಸ್ಪಷ್ಟತೆಯನ್ನು ಅರ್ಥೈಸಿಕೊಂಡು ಜನ ಜೀವನದಲ್ಲಿ ಅಳವಡಿಸಿಕೊಳ್ಳುವ ಅನಿವಾರ್ಯತೆಯಿದೆ. ಧರ್ಮ ಮಾನವನ ಸುಖ ಶಾಂತಿಯುತ ಜೀವನಕ್ಕೆ ಎಂಬುದನ್ನು ಅರಿಯುದು ಅಷ್ಟೇ ಸೂಕ್ತವಾದುದು.

**ಆಕರ ಗ್ರಂಥಗಳು**


1. ಎಮ್. ಚಿದಾನಂದ ಮೂರ್ತಿ (2009) – ವಚನ ಸಾಹಿತ್ಯ, ಸಪ್ನಾ ಬುಕ್ ಹೌಸ್, ಬೆಂಗಳೂರು.
2. ಕೆ. ಮರಳು ಸಿದ್ದಯ್ಯಾ, ಕಿರಮ್ ನಾಗರಾಜ (2010) – ವಚನ ಕಮ್ಮಟ, ಸಪ್ನಾ ಬುಕ್ ಹೌಸ್, ಬೆಂಗಳೂರು.
3. ಡಾ. ಎಮ್. ಎಮ್. ಕಲಬುರ್ಗಿ (2019)– ಸಮಗ್ರ ಸಾಹಿತ್ಯ, ಸಂಪುಟ 14, ವಚನ ಸಾಹಿತ್ಯ ಭಾಗ 6. ಸಂ– ಡಾ. ವಿರಣ್ಣ ರಾಜುರ, ಪ್ರ. ವಚನ ಪಿತಾಮಹ ಡಾ. ಪ.ಗೂ. ಹಳಕಟ್ಟಿ ಸಂಶೋಧನಾ ಕೇಂದ್ರ, ಬಿ.ಎಲ್.ಡಿ.ಇ ಸಂಸ್ಥೆ ವಿಜಯಪುರ.